ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330ರಡಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ.

- - o - -

**ವಿಷಯ**

ಕೆ.ಐ.ಎ.ಡಿ.ಬಿ ವತಿಯಿಂದ ಸಿ.ಎ. ಪ್ಲಾಟ್ ಸಂಖ್ಯೆ: 120-ಡಿ ಇ.ಪಿ.ಐ.ಪಿ. ಇಂಡಸ್ಟ್ರೀಯಲ್ ಏರಿಯಾ, ವೈಟ್‌ಫೀಲ್ಡ್, ಬೆಂಗಳೂರು ಇಲ್ಲಿ ಸುಮಾರು 21.00 ಎಕರೆ ಜಾಗವನ್ನು ಉದ್ಯಾನವನಕ್ಕೆಂದು ಬಡಾವಣೆ ನಕ್ಷೆಯಲ್ಲಿ ಕಾಯ್ದಿರಿಸಲಾಗಿತ್ತು. ಪಾರ್ಕ್, ಆಟದ ಮೈದಾನ ಮತ್ತು ಬೇರಾವುದೇ ಸಾರ್ವಜನಿಕ ಉದ್ದೇಶಕ್ಕೆಂದು ಮೀಸಲಿಟ್ಟ ಜಾಗವನ್ನು ಕಡ್ಡಾಯವಾಗಿ ಅದೇ ಉದ್ದೇಶಕ್ಕಾಗಿ ಬಳಸಬೇಕೆಂಬ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶವಿರುತ್ತದೆ. ಅದಾಗ್ಯೂ ಉದ್ಯಾನವನಕ್ಕೆಂದು ಮೀಸಲಿಟ್ಟಿದ್ದ 21.00 ಎಕರೆ ಜಾಗದಲ್ಲಿ 18.00 ಎಕರೆ ಜಾಗವನ್ನು ಈಗಾಗಲೇ ವಿವಿಧ ಉದ್ದೇಶಗಳಿಗೆ ಕಾನೂನು ಬಾಹಿರವಾಗಿ ಸರ್ಕಾರದ ಅನುಮತಿ ಇಲ್ಲದೆ ನೀಡಿ, ಈ ಪೈಕಿ ಉಳಿಕೆ 3.00 ಎಕರೆ ಪ್ರದೇಶವನ್ನು ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಶಾಮೀಲಾಗಿ ಮೆ: ಹರಿವೇದ ಐ.ಟಿ. ಪಾರ್ಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಮಾಲ್ ನಿರ್ಮಾಣಕ್ಕೆಂದು ನೀಡುವುದರ ಮೂಲಕ ಸರ್ಕಾರಕ್ಕೆ ಕೋಟಿಗಟ್ಟಲೆ ನಷ್ಟವನ್ನು ಉಂಟು ಮಾಡಿರುವ ಗಂಭೀರ ವಿಷಯದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ**

ಬೆಂಗಳೂರು ಪೂರ್ವ ತಾಲ್ಲೂಕು, ಹೂಡಿ ಗ್ರಾಮದಲ್ಲಿ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕಾಗಿ ಒಟ್ಟಾರೆ 554-20 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು, ಅಭಿವೃದ್ಧಿಪಡಿಸಿದ ನಂತರ ಹಂಚಿಕೆಗೆ ಲಭ್ಯವಾದ 459-76 ಎಕರೆ ಪ್ರದೇಶವನ್ನು 102 ವಿವಿಧ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ.

ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ಒಂದನೇ ಹಂತದ ಲೇಔಟ್ ನಕ್ಷೆಯನ್ನು ದಿನಾಂಕ 20.01.1996ರಂದು ಅನುಮೋದನೆ ಮಾಡುವಾಗ ಒಟ್ಟಾರೆ 22-47 ಎಕರೆ ಜಮೀನನ್ನು ಪಾರ್ಕ್ ಉದ್ದೇಶಕ್ಕಾಗಿ ಮೀಸಲಿಡಲಾಗಿತ್ತು.

ತದನಂತರ 1998ನೇ ಸಾಲಿನಲ್ಲಿ ಕೆ.ಐ.ಎ.ಡಿ.ಬಿ.ಯ ಅಂದಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಕಾರ್ಯ ನಿರ್ವಾಹಕ ಸದಸ್ಯರು ಇತರ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ನಂತರ, ಸದರಿ ಕೈಗಾರಿಕಾ ಪ್ರದೇಶದಲ್ಲಿ ನಿವೇಶನಗಳಿಗೆ ಇರುವ ಬೇಡಿಕೆಯನ್ನು ಮತ್ತು ಮಂಡಳಿಯ ಹಣಕಾಸು ಪರಿಸ್ಥಿತಿಯನ್ನು ಮನಗಂಡು ಅಷ್ಟೊಂದು ವಿಶಾಲವಾದ ವಿಸ್ತೀರ್ಣವನ್ನು ಪಾರ್ಕ್ ಉದ್ದೇಶಕ್ಕಾಗಿ ಮೀಸಲಿಡುವುದು ಸಮಂಜಸವಲ್ಲವೆಂಬುದನ್ನು ಪರಿಗಣಿಸಿ, ಒಟ್ಟು 22-47 ಎಕರೆ ಜಮೀನಿನ ಪೈಕಿ 10-85 ಎಕರೆ ವಿಸ್ತೀರ್ಣವನ್ನು ನಿವೇಶನಗಳನ್ನಾಗಿ ಪರಿವರ್ತಿಸಿ, ಕೈಗಾರಿಕಾ ಉದ್ದೇಶಗಳಿಗೆ ಹಂಚಿಕೆ ಮಾಡಲು ನಿರ್ಣಯಿಸಲಾಗಿದೆ.

ಸದರಿ 10-85 ಎಕರೆ ವಿಸ್ತೀರ್ಣದ ಜಮೀನನ್ನು 2000 ರಿಂದ 2004 ರ ಅವಧಿಯಲ್ಲಿ ವಿವಿಧ ದಿನಾಂಕಗಳಂದು ವಿವಿಧ 10 ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಒಟ್ಟಾರೆ 22-47 ಎಕರೆ ಪಾರ್ಕ್ ಉದ್ದೇಶಕ್ಕಾಗಿ ಮೀಸಲಿಟ್ಟ ಜಮೀನಿನಲ್ಲಿ 10-85 ಎಕರೆ ಜಮೀನನ್ನು ಕೈಗಾರಿಕಾ ನಿವೇಶನಗಳನ್ನಾಗಿ ವಿಂಗಡಿಸಿ ಹಂಚಿಕೆ ಮಾಡಿದ ನಂತರ, ಬಾಕಿ ಉಳಿದ 11-62 ಎಕರೆ ಜಮೀನಿನಲ್ಲಿ 3-95 ಎಕರೆ ಜಮೀನನ್ನು 3 ಘಟಕಗಳಿಗೆ ಸಿ.ಎ ಉದ್ದೇಶಕ್ಕಾಗಿ ವಿವಿಧ ದಿನಾಂಕಗಳಂದು ಹಂಚಿಕೆ ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.

ಬಾಕಿ ಉಳಿದ 7-67 ಎಕರೆ ಜಮೀನಿನಲ್ಲಿ 1-82 ಎಕರೆ ನೀರಿನ ಟ್ಯಾಂಕ್ ಪ್ರದೇಶವಾಗಿದ್ದು, 5-85 ಎಕರೆ ಬಾಕಿ ಉಳಿದಿರುತ್ತದೆ.

ದಿನಾಂಕ 30.10.2008ರಲ್ಲಿ ಅಂದಿನ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ನಿವೇಶನ ಸಂಖ್ಯೆ 120 ರಲ್ಲಿ ಲಭ್ಯವಿರುವ 5-85 ಎಕರೆ ಪಾರ್ಕ್ ಪ್ರದೇಶವನ್ನು ಸಾರ್ವಜನಿಕ ಸೌಲಭ್ಯಗಳಿಗಾಗಿ (ಸಿವಿಕ್ ಅಮೆನಿಟೀಸ್) ಕಾಯ್ದಿರಿಸಲು ನಿರ್ದೇಶನ ನೀಡಿದ್ದು, ದಿನಾಂಕ 19.12.2008ರಂದು ನಡೆದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸಭೆಯಲ್ಲಿ ಪಾರ್ಕ್ ಪ್ರದೇಶವಾದ 5-85 ಎಕರೆ ಜಮೀನನ್ನು ಸಾರ್ವಜನಿಕ ಸೌಲಭ್ಯಗಳ (ಸಿವಿಕ್ ಅಮೆನಿಟೀಸ್) ಪ್ರದೇಶ ಎಂದು ಕಾಯ್ದಿರಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ನಿರ್ಣಯಿಸಲಾಗಿದೆ.

ದಿನಾಂಕ 26.06.2009 ಮತ್ತು 31.07.2009ರಂದು ನಡೆದ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಗಳಲ್ಲಿ ಈ ಕೆಳಕಂಡ ಯೋಜನೆಗಳಿಗೆ ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದಲ್ಲಿ 5-85 ಎಕರೆ ಜಮೀನನ್ನು ಚಾಲ್ತಿ ಜಮೀನಿನ ದರ ಮತ್ತು ಹೆಚ್ಚುವರಿ ಶೇಕಡಾ 10ರಂತೆ ದರವನ್ನು ವಿಧಿಸಿ ಹಂಚಿಕೆ ಮಾಡಲು ಕೆ.ಐ.ಎ.ಡಿ.ಬಿ.ಗೆ ಶಿಫಾರಸ್ಸು ಮಾಡಲಾಗಿದೆ :-

| ಕ್ರ. ಸಂ. | ಕಂಪೆನಿಯ ಹೆಸರು | ಉದ್ದೇಶ | ಶಿಫಾರಸ್ಸು ಮಾಡಿದ ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | ಮೆ॥ ಹರಿ ವೇದ ಐಟಿ ಪಾರ್ಕ್ಸ್ ಪ್ರೈ.ಲಿ. | ಷಾಪಿಂಗ್ ಮಾಲ್, ಮಲ್ಟಿಪ್ಲೆಕ್ಸ್, ಐಟಿ/ ಐಟಿಇಎಸ್ ಮತ್ತು ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ | 3-00 |
| 2 | ಮೆ॥ ಕಪ್ಪ ಟೆಕ್ನಾಲಜಿ ಇಂಡಿಯಾ ಪ್ರೈ.ಲಿ. | ಐ.ಟಿ ಪಾರ್ಕ್ | 2-85 |

ಸರ್ಕಾರದ ಪತ್ರ ಸಂಖ್ಯೆ ಸಿಐ 469 ಎಸ್‌ಪಿಕ್ಯೂ 2009, ದಿನಾಂಕ 25.11.2009ರಲ್ಲಿ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ ಮೆ॥ ಕಪ್ಪ ಟೆಕ್ನಾಲಜಿ ಇಂಡಿಯಾ ಪ್ರೈ.ಲಿ.ರವರಿಗೆ 2-85 ಎಕರೆ ಹಾಗೂ ಮೆ॥ ಹರಿ ವೇದ ಐ.ಟಿ. ಪಾರ್ಕ್ ಪ್ರೈ.ಲಿ.ರವರಿಗೆ 3-00 ಎಕರೆ ಜಮೀನನ್ನು ಹಂಚಿಕೆ ದರವಾದ ರೂ.2.00 ಕೋಟಿಗಳಿಗೆ ಶೇಕಡಾ 10ರಷ್ಟು ಹೆಚ್ಚುವರಿ ಹಣವನ್ನು ಪಾವತಿಸಿಕೊಂಡು ಹಂಚಿಕೆ ಮಾಡಲು ಕೆ.ಐ.ಎ.ಡಿ.ಬಿ.ಗೆ ತಿಳಿಸಲಾಗಿದೆ.

. . . . 2

ಅಂತೆಯೇ ಮೆ|| ಹರಿ ವೇದ ಐ.ಟಿ. ಪಾರ್ಕ್ ಪ್ರೈ.ಲಿ.ರವರಿಗೆ ಎಕರೆಯೊಂದಕ್ಕೆ ರೂ.2.20 ಕೋಟಿಗಳಂತೆ ಜಮೀನಿನ ದರದ ಶೇಕಡಾ 20ರಷ್ಟು ಹಣವನ್ನು ಪ್ರಾರಂಭಿಕ ಠೇವಣಿಯನ್ನಾಗಿ ರೂ.132.00 ಲಕ್ಷಗಳನ್ನು ಪಾವತಿಸಲು ದಿನಾಂಕ 07.12.2009ರಂದು ಪತ್ರ ಬರೆಯಲಾಗಿದೆ.

ಮೆ|| ಹರಿ ವೇದ ಐಟಿ ಪಾರ್ಕ್ಸ್ ಪ್ರೈ.ಲಿ. ಕಂಪನಿಯು ಜಮೀನಿನ ಶೇಕಡಾ 20ರಷ್ಟು ಹಣವಾದ ರೂ.132.00 ಲಕ್ಷಗಳಿಗೆ ಪ್ರತಿಯಾಗಿ ದಿನಾಂಕ 19.12.2009ರಂದು ರೂ.72.00 ಲಕ್ಷಗಳು, ದಿನಾಂಕ 03.03.2010ರಂದು ರೂ.6.00 ಲಕ್ಷಗಳು ಹಾಗೂ ದಿನಾಂಕ 08.03.2010ರಂದು ರೂ.12.00 ಲಕ್ಷಗಳು ಅಂದರೆ ಒಟ್ಟು ರೂ.90.00 ಲಕ್ಷಗಳನ್ನು ಪಾವತಿಸಿರುತ್ತದೆ.

ದಿನಾಂಕ 15.03.2010ರಂದು ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ 120-ಡಿ ರಲ್ಲಿ 3-00 ಎಕರೆ ಜಮೀನನ್ನು ಎಕರೆಯೊಂದಕ್ಕೆ ರೂ.2.20 ಕೋಟಿಗಳಂತೆ ದರವನ್ನು ವಿಧಿಸಿ ಹಂಚಿಕೆ ಪತ್ರ ನೀಡಲಾಗಿದೆ. ಹಂಚಿಕೆ ಪತ್ರದ ನಿಬಂಧನೆಗಳಂತೆ, ಕಂಪನಿಯು ಜಮೀನಿನ ಶೇಕಡಾ 20ರ ಮೊತ್ತದಲ್ಲಿ ಬಾಕಿ ಹಣವಾದ ರೂ.42.00 ಲಕ್ಷಗಳನ್ನು ವಾರ್ಷಿಕ ಶೇಕಡಾ 12.75ರ ಬಡ್ಡಿ ದರದಂತೆ ರೂ.44,014/-ಗಳನ್ನು ದಿನಾಂಕ 14.04.2010ರ ಒಳಗಾಗಿ ಕೆ.ಐ.ಎ.ಡಿ.ಬಿ.ಗೆ ಪಾವತಿಸಬೇಕಾಗಿತ್ತು.

ಅಲ್ಲದೆ, ಬಾಕಿ ಶೇಕಡಾ 80ರಷ್ಟು ಹಂಚಿಕೆ ಮೊತ್ತ ರೂ.5.28 ಕೋಟಿಗಳನ್ನು ದಿನಾಂಕ 10.09.2010ರ ಒಳಗಾಗಿ ಕೆ.ಐ.ಎ.ಡಿ.ಬಿ.ಗೆ ಪಾವತಿಸಬೇಕಾಗಿದ್ದು, ಕಂಪನಿಯು ನಿಗದಿತ ಅವಧಿಯೊಳಗಾಗಿ ರೂ.42,44,014/- ಮತ್ತು ರೂ.5,28,00,000/-ಗಳನ್ನು ಪಾವತಿಸದೇ ಇರುವುದರಿಂದ, ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ 120-ಡಿ ರಲ್ಲಿ ಮಾಡಲಾದ 3-00 ಎಕರೆ ಜಮೀನಿನ ಹಂಚಿಕೆಯು ರದ್ದಾಗಿರುತ್ತದೆ ಎಂದು ದಿನಾಂಕ 28.09.2010ರಂದು ಕಂಪನಿಗೆ ಬರೆದ ಪತ್ರದಲ್ಲಿ ತಿಳಿಸಲಾಗಿದೆ.

ಕಂಪನಿಯವರು ಬಾಕಿ ಮೊತ್ತ ರೂ.42,44,014/- ಮತ್ತು ರೂ.5,28,00,000/-ಗಳನ್ನು ಬಡ್ಡಿ ಸಹಿತ ಮಂಡಳಿಗೆ ದಿನಾಂಕ: 23.03.2011 ರಂದು ಪಾವತಿಸಿದ್ದು, ಸರ್ಕಾರವು ಸದರಿ ಜಮೀನಿನ ಬಗ್ಗೆ ನೀಡುವ ನಿರ್ದೇಶನಕ್ಕೆ ಒಳಪಡುವ ಷರತ್ತಿಗೆ ಒಳಪಟ್ಟು, ಸದರಿ ಮೊತ್ತವನ್ನು ದಿನಾಂಕ 05.04.2011 ರಂದು ಮಂಡಳಿಯು ಅಂಗೀಕರಿಸಲಾಗಿದೆ.

ಮೆ|| ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ. ಇವರು 2010ನೇ ಸಾಲಿನಲ್ಲಿ ಅವರ ಅನುಮೋದಿತ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ರೂ.6.60 ಕೋಟಿಗಳನ್ನು ಕೆ.ಐ.ಎ.ಡಿ.ಬಿ.ಗೆ ಪಾವತಿಸಿದ್ದು, ಇಲ್ಲಿಯವರೆಗೂ ಕೆ.ಐ.ಎ.ಡಿ.ಬಿ.ಯು ಸ್ವಾಧೀನ ಪತ್ರ ಮತ್ತು ಲೀಸ್ ಕರಾರು ಪತ್ರವನ್ನು ನೀಡಿರದ ಬಗ್ಗೆ ಅನೇಕ ಮನವಿ ಪತ್ರಗಳನ್ನು ಸಲ್ಲಿಸುತ್ತಾ, ಸದರಿ ನಿವೇಶನದ ಸ್ವಾಧೀನ ಪತ್ರ ಮತ್ತು ಲೀಸ್ ಕರಾರು ಪತ್ರವನ್ನು ನೀಡುವಂತೆ ಕೋರಿರುತ್ತಾರೆ.

ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ದಿನಾಂಕ: 24.11.1998ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1) ಹಾಗೂ 1(3)ರಡಿ

ಅಧಿಸೂಚನೆ ಹೊರಡಿಸಿದ್ದು, ಅದು ಈಗ ಕೆ.ಐ.ಎ.ಡಿ.ಬಿ.ಗೆ ಸೇರಬೇಕಾದ ಜಮೀನಾಗಿರುತ್ತದೆ. ಈ 5-00 ಎಕರೆ ಜಮೀನನ್ನು ಮಂಡಳಿಗೆ ಹಸ್ತಾಂತರಿಸಲು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಕೋರಲಾಗಿದ್ದು, ಈ ಕುರಿತು ಅಪರ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ಸದರಿ ಸರ್ವೆ ನಂಬರ್ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ಕಾಯ್ದೆ ಕಲಂ 20(2)ಸಿ ರನ್ವಯ ಮಂಡಳಿಗೆ ಹಸ್ತಾಂತರಗೊಳಿಸಲು ಈಗಾಗಲೇ ಕ್ರಮ ತೆಗೆದುಕೊಂಡಿರುವುದಾಗಿ ದಿನಾಂಕ: 31.10.2018ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಿಳಿಸಿರುತ್ತಾರೆ.

ದಿನಾಂಕ: 31.10.2018ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ:-

1. ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ಕರ್ನಾಟಕ ಭೂಮಂಜೂರಾತಿ ಕಾಯ್ದೆ ಕಲಂ 20(2)ಸಿ ರನ್ವಯ ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ ವರ್ಗಾಯಿಸುವ ಕುರಿತು ಕೂಡಲೇ ಕ್ರಮ ವಹಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಪತ್ರ ಮುಖೇನ, ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರನ್ನು ಕೋರುವುದು.
2. ಈಗಾಗಲೇ ಈ ಜಮೀನನ್ನು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ ವರ್ಗಾಯಿಸಲು ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡಿರುವುದರಿಂದ ಹಾಗೂ ಸದರಿ 5-00 ಎಕರೆ ಜಮೀನಿಗೆ ದಿನಾಂಕ: 24.11.1998ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1) ಹಾಗೂ 1(3) ರಡಿ ಅಧಿಸೂಚನೆ ಹೊರಡಿಸಿರುವುದರಿಂದ ಈ ಜಮೀನನ್ನು ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕಾಗಿ ಪಾರ್ಕ್ ಎಂದು ಮೀಸಲಿಡುವುದು ಮತ್ತು ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ಸಂ: 120-ಡಿ ರಲ್ಲಿನ 3-00 ಎಕರೆ ಜಮೀನನ್ನು ಸಿ.ಎ. ನಿವೇಶನವನ್ನಾಗಿ ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಈ ಜಮೀನನ್ನು ಚಾಲ್ತಿಯಲ್ಲಿರುವ ಬಡಾವಣೆ ನಕ್ಷೆಗೆ ಸೂಕ್ತ ಮಾರ್ಪಾಡು ಮಾಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸುವುದು.

ಅದರಂತೆ, ದಿನಾಂಕ: 17.01.2019ರಂದು ನಡೆದ 359ನೇ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

1. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ.79ರ 5-00 ಎಕರೆ ಸರ್ಕಾರಿ ಜಮೀನನ್ನು ಮಂಡಳಿಗೆ ಹಸ್ತಾಂತರಗೊಂಡ ನಂತರ ಸದರಿ ಜಮೀನನ್ನು ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ ಉದ್ಯಾನವನಕ್ಕಾಗಿ (ಪಾರ್ಕ್) ಮೀಸಲಿಡುವುದು.
2. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯಲ್ಲಿ ಈಗಾಗಲೇ ಹಂಚಿಕೆಯಾಗಿರುವ ಸಂ: 120ಡಿ ರಲ್ಲಿನ 3-00 ಎಕರೆ ಜಮೀನನ್ನು ಸಿ.ಎ.

ನಿವೇಶನವನ್ನಾಗಿ ಚಾಲ್ತಿಯಲ್ಲಿರುವ ಬಡಾವಣೆ ನಕ್ಷೆಗೆ ಸೂಕ್ತ ಮಾರ್ಪಾಡು ಮಾಡುವುದು.

3. ಮೆ. ಹರಿವೇದ ಐಟಿ ಪಾರ್ಕ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 120-ಡಿ ರಲ್ಲಿ 3-00 ಎಕರೆ ಜಮೀನಿನ ಹಂಚಿಕೆಯನ್ನು ರೆಸ್ಟೋರ್ ಮಾಡಿ ಊರ್ಜಿತಗೊಳಿಸುವುದು.

ತದನಂತರ, ದಿನಾಂಕ: 17.01.2019ರಂದು ನಡೆದ 359ನೇ ಮಂಡಳಿ ಸಭೆಯ ನಿರ್ಣಯದಂತೆ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶ ವೈಟ್‌ಫೀಲ್ಡ್ ಬೆಂಗಳೂರು ಇಲ್ಲಿ ನಿವೇಶನ ಸಂಖ್ಯೆ: 120-ಡಿ ಅನ್ನು ಬಡಾವಣೆ ನಕ್ಷೆಯಲ್ಲಿ ಸಿ.ಎ. ನಿವೇಶನವೆಂದು ಬದಲಾವಣೆ ಮಾಡಿದ ನಂತರ ಮೆ|| ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ.ರವರಿಂದ ಬಾಕಿ ಮೊತ್ತ ರೂ.41,96,300/-ಗಳನ್ನು ಪಾವತಿಸಿಕೊಂಡು ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ: 120-ಡಿ ರಲ್ಲಿನ 3-00 ಎಕರೆ ಜಮೀನಿನ ಹಂಚಿಕೆಯನ್ನು ದಿನಾಂಕ: 21.02.2019ರಂದು ರೆಸ್ಟೋರ್ ಮಾಡಿ ಊರ್ಜಿತಗೊಳಿಸಲಾಗಿರುತ್ತದೆ. ದಿನಾಂಕ: 27.02.2019ರಂದು ಜಮೀನಿನ ಸ್ವಾಧೀನ ಪತ್ರವನ್ನು ನೀಡಲಾಗಿದೆ. ದಿನಾಂಕ: 11.03.2019ರಂದು ಗುತ್ತಿಗೆ ಕರಾರು ಪತ್ರವನ್ನು ಮಾಡಿಕೊಡಲಾಗಿದೆ. ಆದರೆ, ಕಟ್ಟಡ ನಕ್ಷೆ ಅನುಮೋದನೆ ನೀಡಿರುವುದಿಲ್ಲ.

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದಲ್ಲಿರುವ ನಲ್ಲೂರಹಳ್ಳಿ ಗ್ರಾಮದ ಸರ್ವೇ ನಂ. 79ರ 5 ಎಕರೆ ಸರ್ಕಾರಿ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮಂಜೂರು ಮಾಡಿ ಹಸ್ತಾಂತರಿಸುವಂತೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಕಂದಾಯ ಇಲಾಖೆಗೆ ಬರೆದ ದಿನಾಂಕ: 04.02.2019, 13.05.2019 ಹಾಗೂ 12.10.2019ರ ಪತ್ರಗಳಲ್ಲಿ ಕೋರಲಾಗಿದೆ. ಸರ್ಕಾರಿ ಜಮೀನನ್ನು ಹಸ್ತಾಂತರಿಸುವ ಪ್ರಕ್ರಿಯೆಯು ಕಂದಾಯ ಇಲಾಖೆಯಲ್ಲಿ ಪ್ರಗತಿಯಲ್ಲಿದೆ.

ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79 ರಲ್ಲಿನ 5-00 ಎಕರೆ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯು ಇನ್ನೂ ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರಿಸದೆ ಇರುವುದರಿಂದ, ದಿನಾಂಕ: 21.02.2019ರಂದು ನೀಡಲಾದ ಹಂಚಿಕೆ ಊರ್ಜಿತ ಪತ್ರ, ದಿನಾಂಕ: 27.02.2019ರಂದು ನೀಡಲಾದ ಜಮೀನಿನ ಸ್ವಾಧೀನ ಪ್ರಮಾಣ ಪತ್ರ ಹಾಗೂ ದಿನಾಂಕ: 11.03.2019ರಂದು ಮಾಡಿಕೊಡಲಾದ ಗುತ್ತಿಗೆ ಕರಾರು ಪತ್ರವನ್ನು ತಡೆಹಿಡಿಯಲಾಗಿದೆ ಎಂದು ಕೆ.ಐ.ಎ.ಡಿ.ಬಿ.ಯ ದಿನಾಂಕ: 27.09.2019 ರ ಪತ್ರದಲ್ಲಿ ಮೆ. ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ.ರವರಿಗೆ ತಿಳಿಸಲಾಗಿದೆ.

ಸಂಖ್ಯೆ: **ಸಿಐ 20 ಐಎಪಿ 2020**

(ಜಗದೀಶ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆ ಸಚಿವರು

. . . . 5

ಅನುಬಂಧ-1

2000 ದಿಂದ 2004 ರ ಅವಧಿಯಲ್ಲಿ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ 10.85 ಎಕರೆ ವಿಸ್ತೀರ್ಣದ ಜಮೀನನ್ನು ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಲಾದ ವಿವರಗಳು

| ಕ್ರಮ ಸಂಖ್ಯೆ | ಕೈಗಾರಿಕಾ ಘಟಕದ ಹೆಸರು | ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ/ ಮಂಡಳಿ ಸಭೆ ಮಂಡಳಿ ಹಂಚಿಕೆ ಸಮಿತಿ ಸಭೆ ಅನುಮೋದನೆಯ ವಿವರಗಳು | ನಿವೇಶನ ಸಂಖ್ಯೆ | **ವಿಸ್ತೀರ್ಣ (ಚ.ಮೀ.)** | ಹಂಚಿಕೆ ಮಾಡಲಾದ ದಿನಾಂಕ |
|---|---|---|---|---|---|
| 1 | ಭಾರತಿ ಮೊಬೈಲ್ ಲಿಮಿಟೆಡ್ | ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ ದಿನಾಂಕ 9-6-2000 | 111 ಮತ್ತು 112 | **8219.30** | 6-7-2000 |
| 2 | ಯುನೈಟೆಡ್ ಟೆಲಿಕಾಂ ಲಿಮಿಟೆಡ್ | ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ ದಿನಾಂಕ 14-6-2000 | 113, 114 ಮತ್ತು 115 | **12278.00** | 28-6-2000 |
| 3 | ಶೈಲೇಂದ್ರ ಟೆಕ್ನೋ ಪಾರ್ಕ್ | ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 13-3-2002 | 116 | **4055.00** | 22-3-2002 |
| 4 | ನೀಲ್ ಕಂಪ್ಯೂಟೆಕ್ ಪ್ರೈವೇಟ್ ಲಿಮಿಟೆಡ್ | ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 29-6-2004 | 117 | **4063.00** | 6-8-2004 |
| 5 | ರಾವ್ ಕಂಪ್ಯೂಟರ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ | ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ ದಿನಾಂಕ 21-8-2000 | 118 | **4096.00** | 3-10-2000 |
| 6 | ಎನ್ವಿಷನ್ ನೆಟ್ ವರ್ಕ್ | ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 20-10-2003 | 119 | **4067.00** | 1-12-2003 |
| 7 | ಪೂರ್ಣಿಮ ಸಾಫ್ಟ್ ವೇರ್ | ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 13-5-2003 | 120-ಎ1 | **1113.00** | 10-6-2003 |

| | | | | | |
|---|---|---|---|---|---|
| 8 | ಹಂಸ ಕ್ರಿಯೇಷನ್ಸ್ | ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 20-10-2003 | 120-ಎ2 | 999.00 | 12-11-2003 |
| 9 | ಇಂಡೋಕೋರ್ ಇಂಟೀರಿಯರ್ಸ್ | ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 8-9-2003 | 120-ಎ-3 | 3458.00 | 7-10-2003 |
| 10 | ಎರ್ಗೋಟೆಕ್ ಸೀಟಿಂಗ್ಸ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ | ಉಪ ಸಮಿತಿ ಸಭೆ ದಿನಾಂಕ 26-10-1995 | 120-ಪಿ | 1550.00 | 18-7-2000 |
| | | ಒಟ್ಟು | | 43,898.30 ಚ.ಮೀ. 10.85 ಎಕರೆಗಳು | |

ಅನುಬಂಧ- 2

ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ 14.89 ಎಕರೆ ವಿಸ್ತೀರ್ಣದ ಜಮೀನನ್ನು ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಲಾದ ವಿವರಗಳು

| ಕ್ರಮ ಸಂಖ್ಯೆ | ಕೈಗಾರಿಕಾ ಘಟಕದ ಹೆಸರು | ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ/ ಮಂಡಳಿ ಸಭೆ ಮಂಡಳಿ ಹಂಚಿಕೆ ಸಮಿತಿ ಸಭೆ ಅನುಮೋದನೆಯ ವಿವರಗಳು | ನಿವೇಶನ ಸಂಖ್ಯೆ | ವಿಸ್ತೀರ್ಣ (ಚ.ಮೀ.) | ಹಂಚಿಕೆ ಮಾಡಲಾದ ದಿನಾಂಕ |
|---|---|---|---|---|---|
| 1 | ಬಿ.ಎಂ.ಟಿ.ಸಿ (ಕರ್ನಾಟಕ ಸರ್ಕಾರದ ಸಂಸ್ಥೆ) | ಮಂಡಳಿ ಸಭೆ ದಿನಾಂಕ 27-3-1999 ಮಂಡಳಿ ಸಭೆ ದಿನಾಂಕ 18-5-1999 ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 29-4-2000 | 120-ಎ | 12,140.61 | 12-5-2000 |
| 2 | ಯೋಷಿತಾ ಹೈಟೆಕ್ ಇಂಟರ್ ನ್ಯಾಷನಲ್ | ಮಂಡಳಿ ಹಂಚಿಕೆ ಸಮಿತಿ ಸಭೆ ದಿನಾಂಕ 10-10-2000 | 120-ಬಿ | 540.00 | 6-10-2000 |
| 3 | ಕೊಚಿನ್ ಎಸ್ ಇ ಜೆಡ್ (ಭಾರತ ಸರ್ಕಾರ) | ಸರ್ಕಾರದ ಪತ್ರ ಸಂಖ್ಯೆ ಸಿಐ: 436 ಎಸ್ ಪಿ ಐ 2005 ದಿನಾಂಕ 15-9-2005 ಮಂಡಳಿ ಸಭೆ ದಿನಾಂಕ 14-10-2005 | 120-ಸಿ | 3315.00 | 28-5-2007 |
| | | ಒಟ್ಟು | | 15995.61 ಚ.ಮೀ 3.95 ಎಕರೆಗಳು | |